ಫ್ಯಾಕ್ಸ್ : 080 – 2202 8041 ದೂರವಾಣಿ : 080 – 2202 8032

ಕರ್ನಾಟಕ ಸರ್ಕಾರ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2015–16 ದಿನಾಂಕ: 16–11–2015

# ಪತ್ರಿಕಾ ಆಮಂತ್ರಣ

| ಕ್ರಮ ಸಂಖ್ಯೆ | ಕಾರ್ಯಕ್ರಮಗಳ ವಿವರ | ದಿನಾಂಕ / ಸಮಯ | ಕಾರ್ಯಕ್ರಮ ನಡೆಯುವ ಸ್ಥಳ |
|---|---|---|---|
| 1 | ರಾಜ್ಯ ಆಯುಕ್ತರು, ಅಂಗವಿಕಲ ವ್ಯಕ್ತಿಗಳ ಅಧಿನಿಯಮ, ಬೆಂಗಳೂರು ಅವರಿಂದ ಸಾರ್ವಜನಿಕ ಸ್ಥಳ/ಕಟ್ಟಡಗಳಲ್ಲಿ ವಿಕಲಚೇತನರ ಅಡೆ–ತಡೆ ವಾತಾವರಣದ ಬಗ್ಗೆ ಪರಿಶೀಲನೆ | 17–11–2015 ಮಂಗಳವಾರ ಬೆಳಿಗ್ಗೆ 11–30 ಗಂಟೆಗೆ | ಕಂಠೀರವ ಒಳಾಂಗಣ ಕ್ರೀಡಾಂಗಣದ ಆವರಣ, ಬೆಂಗಳೂರು |

ನಿರ್ದೇಶಕರ ಪರವಾಗಿ

## ಪತ್ರಿಕಾ ಪ್ರಕಟಣೆ

# ರಾಜ್ಯ ವಿಧಾನ ಸಭೆಯ ಅಧಿವೇಶನ ಆರಂಭ
# ಅಗಲಿದ ಗಣ್ಯರಿಗೆ ಸಂತಾಪ ಸದನ ನಾಳೆಗೆ

ಬೆಂಗಳೂರು, ಬೆಂಗಳೂರು, ನವೆಂಬರ್ 16 (ಕರ್ನಾಟಕ ವಾರ್ತೆ)

ಕರ್ನಾಟಕ ವಿಧಾನ ಸಭೆಯ ಅಧಿವೇಶನ ಇಂದು ಆರಂಭಗೊಂಡಿತು.

ಈ ಸಂದರ್ಭದಲ್ಲಿ ರಾಜ್ಯ ವಿಧಾನ ಸಭಾಧ್ಯಕ್ಷ ಕಾಗೋಡು ತಿಮ್ಮಪ್ಪ ಅವರು ಸಂತಾಪ ಸೂಚನ ನಿರ್ಣಯ ಮಂಡಿಸಿದರು. ಸಂತಾಪ ಸೂಚಕದಲ್ಲಿ ಇತ್ತೀಚೆಗೆ ನಿಧನರಾದ ವಿಧಾನ ಸಭೆಯ ಹಾಲಿ ಸದಸ್ಯ ಎ. ವೆಂಕಟೇಶನಾಯಕ, ಮಾಜಿ ಸಚಿವ ಎಂ. ಮಹದೇವು, ಮಾಜಿ ಸದಸ್ಯರುಗಳಾದ ಜಿ. ಮಹದೇವಪ್ಪ, ಎಸ್.ಜಿ. ಪ್ರಕಾಶ್ ಶೆಟ್ಟಿ, ಹೆಚ್.ಬಿ. ಕೃಷ್ಣಮೂರ್ತಿ, ಕನ್ನಡ ಹಿರಿಯ ಸಾಹಿತಿಗಳಾದ ಕೈಯಾರ ಕಿಞ್ಞಣ್ಣ ರೈ ಡಾ: ಎ. ಎಂ.

ಕಲಬುರಗಿ ಮತ್ತು ಕನ್ನಡ ಚಿತ್ರರಂಗದ ಹಿರಿಯ ನಿರ್ದೇಶಕರ ಕೆ.ಎಸ್.ಎಲ್. ಸ್ವಾಮಿ, ಅವರುಗಳ ನಿಧನಕ್ಕೆ ಸಂತಾಪ ಸೂಚನೆ ಮಂಡಿಸಿದರು.

ಅಲ್ಲದೆ ರಾಜ್ಯದಲ್ಲಿ ಇತ್ತೀಚೆಗೆ ಆತ್ಮಹತ್ಯೆ ಮಾಡಿಕೊಂಡ ಮೃತ ರೈತರಿಗೆ ಹಾಗೂ ಫ್ರಾನ್ಸ್‌ನಲಿದಿತ್ತೀಚಿನ ಭಯೋತ್ಪಾದಕ ದಾಳಿಗೆ ತುತ್ತಾದ ನಾಗರಿಕರಿಗೆ ಸಹಾ ಸಂತಾಪ ಸೂಚನೆಯನ್ನು ವಿಧಾನ ಸಭಾಧ್ಯಕ್ಷರು ಮಂಡಿಸಿದರು.

ಈ ಸಂದರ್ಭದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ವಿರೋಧಪಕ್ಷದ ನಾಯಕ ಜಗದೀಶ್ ಶೆಟ್ಟರ್, ವೈ.ಎಸ್.ವಿ. ದತ್ತ, ಗೋವಿಂದ ಎಂ. ಕಾರಜೋಳ ಹಾಗೂ ಪಾಟೀಲ್ ಅವರುಗಳು ಮಾತನಾಡಿ ಮೃತರ ಗುಣಗಾನ ಮಾಡಿದರು. ಹಾಗೂ ರೈತರ ಆತ್ಮ ಹತ್ಯೆ ನಿಲುಗಡೆ ಯತ್ನ ನಡೆಯಬೇಕಿದೆ ಮತ್ತು ಭಯೋತ್ಪಾದಕ ಮುಕ್ತ ಸಮಾಜ ಆಗಬೇಕಿದೆ ಎಂದು ಹೇಳಿದರು.

ನಂತರ ಸಭೆಯು ಒಂದು ನಿಮಿಷ ಮೌನ ಆಚರಿಸಿತು. ವಿಧಾನ ಸಭಾಧ್ಯಕ್ಷರು ಸಭೆಯನ್ನು ಮಂಗಳವಾರ ಬೆಳಿಗ್ಗೆ 11–00 ಗಂಟೆಗೆ ಮುಂದೂಡಿದರು.

ಬಾಬು/ಕೆಎಂ